

# ತುಂಗೆಯ ತಟದಲ್ಲಿ ರಿವರ್‌ಟರ್ನ್ ರಾಗ

■ ನಾಗರಾಜ್ ಚಟ್ನಳ್ಳಿ
ಚಿತ್ರಗಳು: ಪರಮೇಶ್ ಚಟ್ನಳ್ಳಿ



ತುಂಬಾ ದಿನಗಳ ಬಳಿಕ ನನ್ನ ತಮ್ಮ ಪರಮೇಶ್ವರ, 'ತುಂಗೆಯ ತಟಕ್ಕೆ ಹೋಗಿ ಪಕ್ಷಿಗಳಿದ್ದಾವ ನೋಡೋಣ ಬಾ' ಎಂದಾಗ ನಾನು ಉದಾಸೀನ ಮಾಡಿ 'ನೀನೇ ಹೋಗಿ ಬಾ' ಎಂದಿದ್ದೆ. ಆದರೆ, ಆತ ಹೊಳೆಯ ಬಳಿ ಹೋಗಿ ತಕ್ಷಣ ಫೋನ್ ಮಾಡಿ ಕರೆದ. 'ತುಂಬಾ ಪಕ್ಷಿಗಳಿವೆ ಬೇಗ ಬಾ' ಎಂದು ಅವನೆಂದಾಗ ಹೊರಟೇಬಿಟ್ಟೆ.

ಅಲ್ಲಿ ಹೋಗಿ ನೋಡಿದರೆ ಅದ್ಭುತ ಪಕ್ಷಿಲೋಕವೇ ಕಣ್ಣೆದುರು ತೆರೆದಿತ್ತು! ಅದರಲ್ಲೂ ರಂಗನತಿಟ್ಟು ಮುಂತಾದ ದೂರದ ಊರುಗಳಲ್ಲಿ ಛಾಯಾಗ್ರಾಹಕರ ಅಚ್ಚುಮೆಚ್ಚಿನ ಪಕ್ಷಿಯಾದ ರಿವರ್‌ಟರ್ನ್ ಹಕ್ಕಿಗಳ ಸಂತಾನ ಸಂಭ್ರಮ ಮುಗಿಲು ಮುಟ್ಟಿತ್ತು.

ದೂರದಿಂದಲೇ ಅವುಗಳನ್ನು ಗಮನಿಸುತ್ತಾ ಹುಲ್ಲು– ಕಲ್ಲಿನ ಮರೆಯಲ್ಲಿ ಅವಿತು ತೆವಳುತ್ತಾ ಫೋಟೋ ಕ್ಲಿಕ್ಕಿಸತೊಡಗಿದೆವು. ರಿವರ್‌ಟರ್ನ್‌ಗಳು ಗುಂಪು ಗುಂಪಾಗಿ ಹಾರುತ್ತಾ, ಕೇಕೆ ಹಾಕುತ್ತಾ, ನೀರಿಗೆ ದುಮುಕಿ ಮೀನು ಹಿಡಿಯುತ್ತಿದ್ದವು. ಸಿಕ್ಕ ಮೀನುಗಳನ್ನು ಆಗಸದಲ್ಲೇ ಹಾರಾಡುತ್ತಾ ಸಂಗಾತಿಯೊಂದಿಗೆ ಹಂಚಿಕೊಳ್ಳುತ್ತಿದ್ದವು.

ರಿವರ್‌ಟರ್ನ್‌ಗಳ ಈ ಸಂಭ್ರಮದ ಮಧ್ಯೆಯೇ ತುತ್ತು ಕಸಿಯಲು ಗರುಡಗಳೂ ಹಾರಾಡುತ್ತಿದ್ದವು. ರಿವರ್‌ಟರ್ನ್ ಬೇಟೆ ಕಚ್ಚಿಕೊಂಡು ಹಾರುವಾಗ ಹೊಂಚು ಹಾಕಿ ದಾಳಿ ಮಾಡುತ್ತಿದ್ದ ಗರುಡಗಳು ಬೆನ್ನಟ್ಟಿ ಹೋಗಿ ಆಗಸದಲ್ಲೇ ತುತ್ತು ಕಸಿದು ತಮ್ಮ ಹೊಟ್ಟೆಗೆ ಸೇರಿಸಿಕೊಳ್ಳುತ್ತಿದ್ದವು.

ರಿವರ್‌ಟರ್ನ್ ಫೋಟೋಗಳನ್ನು ತೆಗೆಯಲು ರಂಗನತಿಟ್ಟಿಗೆ ಹೋಗಿ ಬಂದಿದ್ದ ನಮಗೆ, ಇಲ್ಲೇ ನಮ್ಮೂರಲ್ಲೇ ತುಂಗೆಯ ತಟದಲ್ಲಿ ನಿಜಕ್ಕೂ ಅದ್ಭುತ ನೋಟಗಳೇ ಸಿಕ್ಕವು. ದಕ್ಷಿಣ ಭಾರತದ ನದೀ ತೀರಗಳಲ್ಲಿ, ಜಲಾಶಯಗಳ ಸನಿಹದಲ್ಲಿ ಇತ್ತೀಚೆಗೆ ರಿವರ್‌ಟರ್ನ್ ಸಂಖ್ಯೆಗಳು ಹೆಚ್ಚಾಗುತ್ತಿವೆ ಎನ್ನುವ ವರದಿಗಳು ನಿಜವೆಂಬುದು ಈ ದೃಶ್ಯ ನೋಡಿದಾಗ ಖಚಿತವಾಯಿತು.

(8ನೇ ಪುಟ ನೋಡಿ)